**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ :-** ಶ್ರೀ ನಿಂಗನಗೌಡ.ಎಸ್.ಪಾಟೀಲ್, ಪದವೀಧರ ಸಹಾಯಕ (ನಿವೃತ್ತ)ರವರ ಕೆ.ಸಿ.ಎಸ್.ಆರ್.ನಿಯಮ 247(ಎ) ರಂತೆ ಸೌಲಭ್ಯವನ್ನು ಮಂಜೂರು ಮಾಡುವ ಬಗ್ಗೆ – ಆದೇಶ.

**ಓದಲಾಗಿದೆ :-**
1. ಕಾರ್ಯನಿರ್ವಾಹಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಧಾರವಾಡ, ರವರ ಪತ್ರ ಸಂಖ್ಯೆ: ಕಾನಿಇಂಧಾ:ಪಂರಾಇಂವಿ:ಆಶಾ:ಸಿಬ್ಬಂದಿ-1:247-ಎ:2017-18, ದಿ:20.07.2017.
2. ಸರ್ಕಾರದ ಆದೇಶ ಸಂಖ್ಯೆ: ಆಇ 9 ಎಸ್‌ಆರ್‌ಎ 2012, ದಿ:08.09.2016

****

**ಪ್ರಸ್ತಾವನೆ :**

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ:20.07.2017ರ ಕಾರ್ಯನಿರ್ವಾಹಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಧಾರವಾಡ ಇವರ ಪತ್ರದಲ್ಲಿ ಶ್ರೀ ನಿಂಗನಗೌಡ.ಎಸ್.ಪಾಟೀಲ, ನಿವೃತ್ತ ಪದವೀಧರ ಸಹಾಯಕರವರಿಗೆ ಕರ್ನಾಟಕ ನಾಗರಿಕ ಸೇವಾ ನಿಯಮಗಳು ನಿಯಮ 247(ಎ)ರ ಪ್ರಕಾರ ಹೆಚ್ಚುವರಿ ಅರ್ಹತಾದಾಯಕ ಸೇವೆಯನ್ನು ಪಿಂಚಣಿ ಉದ್ದೇಶಕ್ಕೆ ಸೇರ್ಪಡೆ ಮಾಡಲು ಮಂಜೂರಾತಿ ನೀಡುವಂತೆ ಕೋರಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ: 08.09.2016ರ ಆರ್ಥಿಕ ಇಲಾಖೆಯ ಆದೇಶದಲ್ಲಿ ಪ್ರಾರಂಭದಲ್ಲಿ ದಿನಗೂಲಿ ಅಥವಾ ಮೀತವೇತನ ಪದವೀಧರರಾಗಿ ನೇಮಕಾತಿ ಹೊಂದಿ, ತದನಂತರ ಕ್ರಮಬದ್ಧಗೊಳಿಸಲಾದ ಸರ್ಕಾರಿ ನೌಕರರು ದಿನಾಂಕ: 14.02.2012 ಮತ್ತು ಅದಕ್ಕಿಂತ ಪೂರ್ವದಲ್ಲಿ ನಿವೃತ್ತರಾದ ಪ್ರಕರಣಗಳಲ್ಲಿ ಅವರ ನಿವೃತ್ತಿ ಸಮಯದಲ್ಲಿ ಜಾರಿಯಲ್ಲಿದ್ದ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 247(ಎ)ರಲ್ಲಿನ ಅವಕಾಶಗಳನ್ವಯ ಸಂಬಂಧಪಟ್ಟ ಎಲ್ಲಾ ಅಗತ್ಯ ಮಾಹಿತಿ/ ದಾಖಲೆಗಳನ್ನು ಪರಿಶೀಲಿಸಿ, ಅರ್ಹ ಪ್ರಕರಣಗಳಲ್ಲಿ ಹೆಚ್ಚುವರಿ ಸೇವೆಯ ಸೇರ್ಪಡೆ ಅಧಿಕಾರವನ್ನು ಆಯಾ ಆಡಳಿತ ಇಲಾಖೆಯ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ ರವರಿಗೆ ಪ್ರತ್ಯಾಯೋಜಿಸಲಾಗಿದೆ.

ಸರ್ಕಾರವು ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿ ಮತ್ತು ದಾಖಲೆಗಳನ್ನು ಪರಿಶೀಲಿಸಿದೆ. ಶ್ರೀ ನಿಂಗನಗೌಡ.ಎಸ್.ಪಾಟೀಲ, ಪದವೀಧರ ಸಹಾಯಕ (ನಿವೃತ್ತ) ಇವರ ಜನ್ಮ ದಿ: 02.03.1949 ಆಗಿದ್ದು, ಇವರು ಮೂಲತಃ ದಿನಗೂಲಿ ನೌಕರರಾಗಿ ಜಿಲ್ಲಾ ಪಂಚಾಯತ್, ಧಾರವಾಡ ಇಲ್ಲಿ ನೇಮಕಾತಿ ಹೊಂದಿ, ದಿನಾಂಕ:02.12.1991 ರಿಂದ ಸರ್ಕಾರಿ ಸೇವೆಯಲ್ಲಿ ಸಕ್ರಮಗೊಂಡು ಒಟ್ಟಾರೆ 15 ವರ್ಷ 03 ತಿಂಗಳು 30 ದಿವಸಗಳು ಅರ್ಹತಾದಾಯಕ ಸೇವೆ ಸಲ್ಲಿಸಿ, ದಿನಾಂಕ:31.03.2007ರಂದು ವಯೋನಿವೃತ್ತಿ ಹೊಂದಿರುತ್ತಾರೆ. ಸದರಿ ದಿನಾಂಕದಂದು ಜಾರಿಯಲ್ಲಿದ್ದ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 247(ಎ)ರ ಅವಕಾಶದನುಸಾರ ಗರಿಷ್ಟ ನಾಲ್ಕು ವರ್ಷಗಳ ಹೆಚ್ಚುವರಿ ಅರ್ಹತಾ ಸೇವೆಯನ್ನು ಮಂಜೂರು ಮಾಡಬಹುದಾಗಿದ್ದು, ಅದರಂತೆ ನಾಲ್ಕು ವರ್ಷಗಳ ಅಧಿಕ ಅರ್ಹತಾ ಸೇವಾವಧಿಯನ್ನು

ಪಿಂಚಣಿ / ನಿವೃತ್ತಿ ಸೌಲಭ್ಯಗಳ ಉದ್ದೇಶಕ್ಕೆ ಮಂಜೂರು ಮಾಡಲು ತೀರ್ಮಾನಿಸಿದೆ. ಆದುದರಿಂದ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 307 ಜಿಪಅ 2016, ದಿನಾಂಕ:11.08.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರವು ಶ್ರೀ ನಿಂಗನಗೌಡ.ಎಸ್.ಪಾಟೀಲ, ಪದವೀಧರ ಸಹಾಯಕ (ನಿವೃತ್ತ)ರವರಿಗೆ ಕರ್ನಾಟಕ ನಾಗರಿಕ ಸೇವಾ ನಿಯಮಗಳು ನಿಯಮ 247(ಎ)ರ ಪ್ರಕಾರ ನಾಲ್ಕು ವರ್ಷಗಳ ಹೆಚ್ಚುವರಿ ಅರ್ಹತಾದಾಯಕ ಸೇವೆಯನ್ನು ಪಿಂಚಣಿ ಉದ್ದೇಶಕ್ಕೆ ಸೇರ್ಪಡೆ ಮಾಡಲು ಮಂಜೂರಾತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

11/08/2017

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ:-

1. ಮಹಾಲೇಖಪಾಲರು, (ಅ ಮತ್ತು ಇ) ಕರ್ನಾಟಕ, ಬೆಂಗಳೂರು.
2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಧಾರವಾಡ.
4. ಕಾರ್ಯನಿರ್ವಾಹಕ ಇಂಜಿನಿಯರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಎಂ.ವಿಶ್ವೇಶ್ವರಯ್ಯ ಮಾರ್ಗ, ಧಾರವಾಡ. **(ಮೂಲ ಸೇವಾ ಪುಸ್ತಕದೊಂದಿಗೆ).**
5. ಶ್ರೀ ನಿಂಗನಗೌಡ.ಎಸ್.ಪಾಟೀಲ, (ನಿವೃತ್ತ), ಹಳ್ಳಿ ಕೆರೆ ಚಾಲ್ಸ್, 2ನೇ ಅಡ್ಡ ರಸ್ತೆ, ಕೆ.ಸಿ.ಪಾರ್ಕ್ ಪೋಸ್ಟ್ ಹತ್ತಿರ, ಧಾರವಾಡ.

ಪ್ರತಿಯನ್ನು:-

1. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಸೇವೆಗಳು-1)
2. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಉಪ ಕಾರ್ಯದರ್ಶಿ (ಆಡಳಿತ) ಇವರುಗಳ ಆಪ್ತ ಕಾರ್ಯದರ್ಶಿ/ ಆಪ್ತ ಸಹಾಯಕರಿಗೆ
3. ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಗ್ರಾ.ಅ.ಪಂ.ರಾಜ್ ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ
4. ರಕ್ಷಾ ಕಡತ/ ಸೂಚನಾ ಫಲಕ/ ಹೆಚ್ಚುವರಿ ಪ್ರತಿಗಳು.